ACHARYA INSTITUTE OF TE... BANGALORE

# CBCS SCHEME

USN | | | | | | | | | | |

21KSK37

Question Paper Version : A

## Third Semester B.E/B.Tech Degree Examination, June/July 2023

# ಸಾಂಸ್ಕೃತಿಕ ಕನ್ನಡ - Samskruthika Kannada

Time: 1 hrs.] [Max. Marks: 50

### ಸೂಚನೆಗಳು

1. ಎಲ್ಲ ೫೦ ಪ್ರಶ್ನೆಗಳಿಗೂ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ.
2. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಯು.ಎಸ್.ಎನ್ ಸಂಖ್ಯೆ ಹಾಗೂ ಪಶ್ನೆ ಪತ್ರಿಕೆಯ ಶ್ರೇಣಿಯನ್ನು ಅಂದರೆ A, B, C ಅಥವಾ D ಯನ್ನು ತಪ್ಪಿಲ್ಲದಂತೆ ಕಡ್ಡಾಯವಾಗಿ ಗುರುತಿಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.
3. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿಮಾಡದೆ ಹಾಗೆಯೇ ಬಿಟ್ಟಲ್ಲಿ ಅಥವಾ ಭರ್ತಿಮಾಡಿದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ರದ್ದು ಪಡಿಸಲಾಗುವುದು.
4. ಕೇವಲ ಒಂದು ಉತ್ತರವನ್ನು ಮಾತ್ರ ಉತ್ತರ ಪತ್ರಿಕೆಯಲ್ಲಿ ಗುರುತಿಸತಕ್ಕದ್ದು. ಒಂದೆ ಪ್ರಶ್ನೆಗೆ ಎರಡು ಉತ್ತರವನ್ನು ಗುರುತಿಸುವುದು ಅಮಾನ್ಯ.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾದ ಓ.ಎಂ.ಆರ್ ಉತ್ತರ ಪತ್ರಿಕೆಯ ಹಾಳೆಯ ಮೇಲೆ ಕಪ್ಪು ಅಥವಾ ನೀಲಿ ಶಾಹಿಯ ಬಾಲ್‌ಪಾಯಿಂಟ್ ಪೆನ್ನಿನಿಂದ ಗುರುತು ಮಾಡಬೇಕು.

---

1. ಕರ್ನಾಟಕ ಗತವೈಭವ ಗ್ರಂಥವನ್ನು ರಚಿಸಿದವರು ----------

   a) ಶ್ರೀರಂಗ b) ಆಲೂರು ವೆಂಕಟರಾಯ

   c) ಡಿ. ಎಲ್. ನರಸಿಂಹಚಾರ್ಯ d) ಕುವೆಂಪು

2. 1955 ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳದ ಅಧ್ಯಕ್ಷರು.

   a) ಕೆ.ಆರ್. ಕಾರಂತ b) ಚಂಗಲರಾಯ ರೆಡ್ಡಿ c) ಶ್ರೀರಂಗ d) ಶಿವಮೂರ್ತಿ ಶಾಸ್ತ್ರಿ

3. ಕನ್ನಡ ಭಾಷೆಯ ಲಿಪಿಯನ್ನು 'ಲಿಪಿಗಳ ರಾಣಿ' ಎಂದು ಕರೆದವರು.

   a) ವಿನೋಬಾಭಾವೆ b) ಸರೋಜಾದೇವಿ

   c) ಶಿವರಾಮ ಕಾರಂತ d) ಎಸ್. ಎಸ್. ಹಿರೇಮಠ

4. ಧರ್ಮ ಸಹಿಷ್ಣತೆ ಕನ್ನಡಿಗರ ಪರಂಪರೆ ಎಂದು ಯಾವ ಶಾಸನ ಕೂಗಿ ಹೇಳುತ್ತದೆ.

   a) ಬೆಂಗಳೂರಿನ b) ಬೇಲೂರಿನ c) ಚಿಕ್ಕಮಗಳೂರಿನ d) ದಾವಣಗೆರೆಯ

5. "ಹಸಿವಾದರೆ ಊರೊಳಗೆ ಭಿಕ್ಷಾನ್ನಗಳುಂಟು, ತೃಷೆಯಾದರೆ, ಕೆರೆಬಾವಿ ಹಳ್ಳಗಳುಂಟು, ಶಯನಕ್ಕೆ ಹಾಳು ದೇಗುಳಗಳುಂಟು ಎಂಬ ವಚನ ಬರೆದವರು.

a) ಬಸವಣ್ಣ b) ಅಕ್ಕಮಹಾದೇವಿ c) ಅಲ್ಲಮಪ್ರಭು d) ಜೇಡರ ದಾಸಿಮಯ್ಯ

6. ಕವಿರಾಜಮಾರ್ಗದಲ್ಲಿ ಹೇಳಿರುವ ಕನ್ನಡಿಗರ ಸ್ವಭಾವವನ್ನು ಕುರಿತ ಪದ್ಯಗಳು ಯಾವ ಶತಮಾನದಲ್ಲಿ ರಚಿಸಲಾಗಿದೆ.

a) ಹತ್ತನೆಯ b) ಎರಡನೆಯ c) ಆರನೆಯ d) ಒಂಬತ್ತನೆಯ

7. ಸರ್ ಥಾಮಸ್ ಮನ್ರೊ ಯಾರು -------

a) ಅಧಿಕಾರಿ b) ವೈದ್ಯ c) ಕಲೆಕ್ಟರ್ d) ಡಿಸಿ

8. ಕನ್ನಡ ಬರಹಗಳಿಗೆ ------- ವರುಷಗಳ ಚರಿತ್ರಯಿದೆ.

a) ಸಾವಿರದ ಐದುನೂರು b) ಸಾವಿರದ ನೂರು

c) ಹತ್ತು ಸಾವಿರ d) ಸಾವಿರದ ಎರಡುನೂರು

9. ಭಾರತದ ಸಂವಿಧಾನ ಅಸ್ತಿತ್ವಕ್ಕೆ ಬಂದ ವರ್ಷ ----------

a) 1947 b) 1950 c) 1998 d) 1945

10. "ಚಾಗದ ಭೋಗದಕ್ಕರದಗೇಯದ ಗೊಟ್ಟಿಯಲಂಪಿನಿಂಪುಗಳ್ಗೆ ಆಗರವಾದ ಮಾನಸರ್" ಎಂದು ಹೇಳಿದ ಕವಿ ---------

a) ರನ್ನ b) ಪಂಪ c) ಕುವೆಂಪು d) ಬಸವಣ್ಣ

11. ಆಯ್ದಕ್ಕಿ ಮಾರಯ್ಯನವರ ವಚನದಲ್ಲಿ ಯಾವುದಕ್ಕೆ ಅತ್ಯಂತ ಹೆಚ್ಚು ಮಹತ್ವವನ್ನು ನೀಡಲಾಗಿದೆ.

a) ಬಡತನ b) ಸಿರಿತನ c) ಬಂಗಾರ d) ವಜ್ರ

12. ಗುರು, ಲಿಂಗ ಮತ್ತು ಜಂಗಮ ಈ ಮೂರಕ್ಕಿಂತ ಅತ್ಯಂತ ಶ್ರೇಷ್ಠವಾದದ್ದು

a) ಕಾಯಕ b) ಮಾತು c) ನಡೆನುಡಿ d) ಸೋಮಾರಿತನ

13. ಅನ್ಯರನ್ನು ದೂಷಿಸಿದರೆ ಅಂಥವರನ್ನು ಚನ್ನಮಲ್ಲಿಕಾರ್ಜುನ ------ ತಳ್ಳುತ್ತಾನೆ.

a) ಸ್ವರ್ಗಕ್ಕೆ b) ಶ್ರಮಕ್ಕೆ c) ನರಕ್ಕೆ d) ಬಡತನಕ್ಕೆ



VTU-16-10-2023 09:28:40am - AY - AY - AY - AY
16-10-2023 09:30:49am - AY - AY - AY - AY - AY

14. ಕುರಿತೋದದೆಯ ಕಾವ್ಯ ಪ್ರಯೋಗ ಪರಿಣತ ಮತಿಗಳ್ ಎಂದು ಕವಿರಾಜಮಾರ್ಗಕಾರ ----- ನೇ ಶತಮಾನದಲ್ಲಿ ಹೇಳಿದ್ದರು.

a) 2 b) 4 c) 6 d) 9

15. ಒಡತನ ಸತ್ತರೆ ------ ಸೌದಿಲ್ಲ

a) ನನಗೆ b) ಸುಡಲಿಕೆ c) ಸಾಯಲು d) ನೆಗೆಯಲು

16. ದಾಸರು ------ ಭಕ್ತರು

a) ಶಿವನ b) ವಿಷ್ಣುವಿನ c) ಸರಸ್ವತಿಯ d) ಹರಿಯ

17. ತಲ್ಲಣಿಸಿದರು ಕಂಡ್ಯ ತಾಳು ಮನವೇ ಎಂಬ ಕೀರ್ತನೆಯನ್ನು ಬರೆದವರು.

a) ಪುರಂದರದಾಸ b) ಬಸವಣ್ಣ c) ಕನಕದಾಸ d) ಅಕ್ಕಮಹಾದೇವಿ

18. ಗೂಗೆ ಕಣ್ಣ ಕಾಣಲರಿಯದೆ ರವಿಯ ಒಯ್ದುದು ಈ ವಚನವನ್ನು ಬರೆದವರು.

a) ಅಕ್ಕಮಹಾದೇವಿ b) ಅಲ್ಲಮಪ್ರಭು c) ಬಸವಣ್ಣ d) ದಾಸಿಮಯ್ಯ

19. ರಾಗಿ ಬೀಸುವ ಕಲ್ಲೆ ----- ಒಡೆಗಲ್ಲೆ

a) ರಾಣಿಯ b) ದಾಸನ c) ರಾಜಾನ d) ದೇವರ

20. ---------- ಒಲುಮೆ ಇದ್ದರೆ ಬಡತನ ನೀಗಿಸುವುದು ಕಷ್ಟವಲ್ಲ

a) ತಾಯಿಯ b) ತಂದೆಯ c) ರಾಜಾನ d) ದೈವದ

21. ನಗವು ಸಹಜ ಧರ್ಮ ನಗಿಸುವುದು ---------

a) ಮಾನವ b) ಪರಧರ್ಮ c) ಜೀವನ d) ದೇವರವರ

22. ಅಂಬಿಕಾತನಯದತ್ತ ಎಂಬುದು ಯಾರ ಕಾವ್ಯನಾಮ.

a) ಪುರಂದರದಾಸ b) ಕನಕದಾಸ c) ದ.ರಾ.ಬೇಂದ್ರೆ d) ಅಕ್ಕಮಹಾದೇವಿ

23. ರಾಷ್ಟ್ರಕವಿ ಎಂಬ ಬಿರುದು ಪಡೆದ ಕವಿ

a) ದ.ರಾ.ಬೇಂದ್ರೆ b) ಬಸವಣ್ಣ c) ಕುವೆಂಪು d) ಅಕ್ಕಮಹಾದೇವಿ

VTU-16-10-2023 09:28:40am - AY - AY - AY - AY - AY
16-10-2023 09:30:49am - AY - AY - AY - AY - AY

24. ನಾಕ ಪದದ ಅರ್ಥ

a) ನರಕ b) ಸ್ವರ್ಗ c) ಭೂಮಿ d) ಮಣ್ಣು

25. ಮಂಕುತಿಮ್ಮನ ಕಗ್ಗ ಕೃತಿಯನ್ನು ಬರೆದವರು.

a) ಕುವೆಂಪು b) ದ.ರಾ.ಬೇಂದ್ರೆ c) ಕನಕದಾಸ d) ಡಿ.ವಿ.ಜಿ

26. ನಾಕುತಂತಿ ಕವನ ಸಂಗ್ರಹಕ್ಕೆ ------ ಪ್ರಶಸ್ತಿ ಬಂದಿದೆ.

a) ಪದ್ಮಭೂಷಣ b) ಪದ್ಮವಿಭೂಷಣ c) ಜ್ಞಾನಪೀಠ d) ಪದ್ಮಶ್ರೀ

27. ಸಾಬಾಣ ಪದದ ಅರ್ಥ

a) ಸಾಬೂನು b) ಅಕ್ಕಿ c) ಕಾಯಿ d) ಹಣ

28. ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟವರು

a) ಡಿ.ವಿ.ಜಿ b) ಕುವೆಂಪು c) ದ.ರ.ಬೇಂದ್ರೆ d) ಕನಕದಾಸ

29. ಕುರುಡು ಕಾಂಚಾಣವನ್ನು ಯಾವ ಕವನಸಂಕಲನೆದಿಂದ ಆಯ್ದುಕೊಳ್ಳಲಾಗಿದೆ

a) ನಾಕುತಂತಿ b) ನಾಟಕ c) ಮಂಕುತಮ್ಮನ ಕಗ್ಗ d) ನಾದಲೀಲೆ

30. ಡಿ.ವಿ.ಜಿಯವರ ಕಾವ್ಯನಾಮ

a) ಮಂಕುತಿಮ್ಮ b) ಕೂಡಲಸಂಗಮದೇವ

c) ಚೆನ್ನಮಲ್ಲಿಕಾರ್ಜುನ d) ರಾಮನಾಥ

31. ಮೊದಲಬಾರಿ ಜೊಗಜಲಪಾತ ಕಂಡು ವಿಶ್ವೇಶ್ವರಯ್ಯ ಅವರು ಉದ್ಗರಿಸಿದ್ದು

a) ಎಷ್ಟೊಂದು ಶಕ್ತಿ ಪೋಲಾಗುತ್ತಿದೆ b) ಎಷ್ಟೊಂದು ಭೀಕರವಾಗಿದೆ

c) ಎಷ್ಟೊಂದು ಗಲಿಜಾಗಿದೆ d) ಎಷ್ಟೊಂದು ಅಧ್ಬುತವಾಗಿದೆ

32. ಡಾ. ವಿಶ್ವೇಶ್ವರಯ್ಯನವರು ------ ರಲ್ಲಿ ಸ್ವಂತ ಇಚ್ಛೆಯಿಂದ ದಿವಾನಗಿರಿಯನ್ನು ಬಿಟ್ಟುಕೊಟ್ಟರು.

a) 1920 b) 1947 c) 1919 d) 1950

33. ಕ್ರಮ, ಶಿಸ್ತು, ತರ್ಕಬದ್ದವಾದ ಆಲೋಚನೆ ನಿಷ್ಪಕ್ಷತೆ ಇವು ----- ರವರ ಹುಟ್ಟು ಗುಣಗಳು

a) ಗಾಂಧೀಜಿ b) ದೇವೇಗೌಡ c) ವಿಶ್ವೇಶ್ವರಯ್ಯ d) ನೆಹರು



VTU-16-10-2023 09:28:40am - AY - AY - AY - AY
16-10-2023 09:30:49am - AY - AY - AY - AY

34. ಕೃಷ್ಣರಾಜಸಾಗರವನ್ನು ಕಟ್ಟಿಸಿದವರು ಯಾರು?
a) ವಿಶ್ವೇಶ್ವರಯ್ಯ b) ಗಾಂಧೀಜಿ c) ನೆಹರು d) ಮೋದಿ

35. ದುಡಿದವನಿಗೆ ಪ್ರತಿಫಲ ದೊರೆಯಲೇಬೇಕು ಎಂದು ಹೇಳಿದವರು
a) ಕುವೆಂಪು b) ದ.ರಾ.ಬೇಂದ್ರೆ c) ಡಿ.ವಿ.ಜಿ. d) ವಿಶ್ವೇಶ್ವರಯ್ಯ

36. ಭಾರತದಲ್ಲಿ ಯಾವ ವರ್ಷದಿಂದ ಕರಕುಶಲ ಕಲೆಗಳಿಗೆ ಬೇಡಿಕೆಯಿದೆ.
a) 1800 b) 2500 c) 2200 d) 2900

37. ಹಳೆಬೇರು ಹೊಸಚಿಗುರು ಒಂದಾಗಿರಲು ಮರ ಸೊಬಗು ಎಂದು ಹೇಳಿದವರು.
a) ಡಿ.ವಿ.ಗುಂಡಪ್ಪ b) ಕುವೆಂಪು c) ವಿಶ್ವೇಶ್ವರಯ್ಯ d) ದ.ರಾ.ಬೇಂದ್ರೆ

38. _______ ಬಟ್ಟೆಯ ಮೇಲಿನ ಮುದ್ರಣ ಕಲೆಗೆ ಮೂಲನೆಲೆ.
a) ಅಮೆರಿಕ b) ಭಾರತ c) ಶ್ರೀಲಂಕ d) ಆಫ್ರಿಕ

39. ಭಾರತದಲ್ಲಿ ಬೇರೆ ಬೇರೆ ಬಣ್ಣಗಳನ್ನು ನೀಡುವ ಸುಮಾರು ______ ಗಿಡಗಳಿವೆ.
a) 100 b) 200 c) 400 d) 300

40. ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಎಲ್ಲಿ ಇದೆ.
a) ಭದ್ರಾವತಿ b) ಶಿವಮೊಗ್ಗ c) ಬೆಂಗಳೂರು d) ಹರಿಹರ

41. ಗೋಪಣ್ಣ ಮಾಸ್ತರರ ಮಗನ ಹೆಸರೇನು?
a) ರಾಮ b) ರಾಜ c) ಪ್ರಹ್ಲಾದ d) ಪ್ರಭು

42 ಇಸ್ಮಾಯಿಲ್ ___________ ಇಂಜಿನಿಯರಿಂಗ್ ಮಾಡುತ್ತಿದ್ದ.
a) ಹಾರ್ಡ್ ವೇರ್ ಇಂಜಿನಿಯರ್ b) ಕಂಪ್ಯೂಟರ್ ಇಂಜಿನಿಯರ್
c) ಸಿವಿಲ್ ಇಂಜಿನಿಯರ್ d) ಮೆಕ್ಯಾನಿಕಲ್ ಇಂಜಿನಿಯರ್

43. ಪ್ರಲ್ಹಾದನ ಹೆಂಡತಿಯ ಹೆಸರು ______
a) ರೇಖಾ b) ಮಮತ c) ರಾಧ d) ರೋಹಿಣಿ

44. ಯುಗಾದಿ ಕಥೆಯನ್ನು ಬರೆದವರು________
a) ಕನಕದಾಸ b) ಡಿ.ವಿ.ಜಿ c) ವಸುಧೇಂದ್ರ d) ಕುವೆಂಪು



VTU-16-10-2023 09:28:40am - AY - AY - AY - AY
16-10-2023 09:30:49am - AY - AY - AY - AY

45. ಗೋಪಣ್ಣ ಮಾಡುತ್ತಿದ್ದ ವೃತ್ತಿ ________
a) ವೈದ್ಯ b) ಮಾಸ್ತರ್ c) ಇಂಜಿನಿಯರ್ d) ಮೆಕ್ಯಾನಿಕಲ್

46. ಮೆಗಾನೆ ಹಳ್ಳಿಯಲ್ಲಿ ಯಾವ ಜನಾಂಗ ವಾಸಿಸುತ್ತಿದ್ದರು
a) ಗಿರಿಜನ b) ಕಳ್ಳರು c) ಕುಣಬಿ d) ಕಾಡುಜನ

47. ಕುಣಬಿ ಜನಾಂಗದವರು ಯಾವ ರಾಜ್ಯಕ್ಕೆ ಸೇರಿದವರು.
a) ಗೋವಾ b) ತಮಿಳನಾಡು c) ಆಂಧ್ರಪ್ರದೇಶ d) ಮಧ್ಯಪ್ರದೇಶ

48. ಮೆಗಾನೆಯ ಕುಣಬಿಯ ಜನಸಂಖ್ಯೆ ________
a) 190 b) 200 c) 180 d) 150

49. ಗಿರಿಜನರ ಜೀವನ ವಿಧಾನಗಳನ್ನು ಕುರಿತು ವೀಡಿಯೋ ಸಾಕ್ಷ ಚಿತ್ರಗಳನ್ನು ತಯಾರಿಸುವ ಯೋಜನೆ ರೂಪಿಸಿದವರು ______
a) ಎಸ್.ಕೆ.ಕರೀಂಖಾನ್ b) ಗಾಂಧೀಜಿ
c) ನೆಹರು d) ಡಿ.ವಿ.ಜಿ

50. 'ಮೆಗಾನೆ ಎಂಬ ಗಿರಿಜನ ಪರ್ವತ' ಬರೆದ ಲೇಖಕರು ________.
a) ಕನಕದಾಸರು b) ಆಯ್ದಕ್ಕಿ ಲಕ್ಕಮ್ಮ c) ಪುರಂದರದಾಸ d) ಹಿ.ಚಿ.ಬೋರಲಿಂಗಯ್ಯ

*****

VTU-16-10-2023 09:28:40am AY - AY - AY - AY - AY
16-10-2023 09:30:43am AY - AY - AY - AY - AY